



ಕಷ್ಟವೆನಿಸುವ ಮನಸ್ಥಿತಿ, ಪರಿಸ್ಥಿತಿಯಲ್ಲಿ ಮಹಿಳೆಯರು ಇರುತ್ತಾರೆ. ಸಮೀಕ್ಷೆಗಳು ಹೇಳುವಂತೆ ಈ ರೀತಿ ಕಿರುಕುಳ ಅನುಭವಿಸುವ ಶೇ. 70 ಮಹಿಳೆಯರು ಕಿರುಕುಳದ ಬಗ್ಗೆ ದೂರನ್ನು ನೀಡುವುದಿಲ್ಲ.

## ಯಾವುದು ಕಿರುಕುಳ?

ನಮ್ಮ ಯಾವುದೇ ನಡತೆ, ಆ ಇನ್ನೊಬ್ಬರ ಒಪ್ಪಿಗೆಯಿಂದ ಮಾಡುತ್ತಿದ್ದೇವೆಯೇ ಇಲ್ಲವೇ, ನಮ್ಮ ಮಾತು–ನಡತೆಯಿಂದ ಅವರಿಗೆ ಇರುಸುಮುರುಸು, ತೊಂದರೆ ಆಗುತ್ತಿದೆಯೇ ಎಂಬ ಜವಾಬ್ದಾರಿ ಪ್ರತಿಯೊಬ್ಬರಲ್ಲಿ ಇರಬೇಕಾದ್ದು. ಹಾಗೆ, ಇನ್ನೊಬ್ಬರ ಒಪ್ಪಿಗೆಯಿಲ್ಲದೇ ಮಾಡುವ ನಡತೆ ಕಿರುಕುಳವಾಗುತ್ತದೆ, ಅಸಭ್ಯವೆನಿಸುತ್ತದೆ.

ಇಂತಹ ಕಿರುಕುಳಗಳು ಗಂಡಸು, ಹೆಂಗಸು, ಮೂರನೆಯ ಲಿಂಗಿಗಳು, ಯಾರ ಮೇಲಾದರೂ ಆಗಬಹುದು. ಮೂರನೆಯ ಲಿಂಗಿಗಳ ಮೇಲೆ ನಡೆಯುವ ದೌರ್ಜನ್ಯ ಬೇರೆಯದೇ ಮಟ್ಟಿನದು. ಬಹುತೇಕ ಉದ್ಯೋಗದ ಸ್ಥಳಗಳಲ್ಲಿ ಹೀಗೆ ನಡೆಯುವ ವೈಯಕ್ತಿಕ ಕಿರುಕುಳಗಳು ಹೆಂಗಸರ ಮೇಲೆಯೇ ನಡೆಯುತ್ತವೆ ಮತ್ತು ಬಹಳ ವ್ಯಾಪಕವಾಗಿ ನಡೆಯುತ್ತವೆ. ಇದಕ್ಕೆ ಕಾರಣ, ನಮ್ಮ ಮನಸ್ಸುಗಳಲ್ಲಿ ಆಳವಾಗಿ ಬೇರೂರಿರುವ ಲಿಂಗ ರೂಪಗಳು; ನಾವೇ ಒಪ್ಪಿಕೊಂಡು, ನಡೆಸಿಕೊಂಡು ಬಂದಿರುವ ಮಹಿಳೆಯ ಸ್ಥಾನ, ಸಮಾಜದಲ್ಲಿ ಅವಳ ಪಾತ್ರ, ಆಕೆಯನ್ನು ಯಾರಾದರೂ ನಡೆಸಿಕೊಳ್ಳಬಹುದಾದ ರೀತಿಗಳ ವಿಷಯದಲ್ಲಿ ನಮ್ಮಲ್ಲಿರುವ ಒಪ್ಪಿಗೆ, ಸ್ವೀಕಾರ.

ಈ ವಿಷಯದ ಕುರಿತಾಗಿ, ಭಾರತದ ಸರ್ವೋಚ್ಚ ನ್ಯಾಯಾಲಯ 'ವಿಶಾಖಾ ಕೇಸ್'ನ ತನ್ನ 1997ರ ತೀರ್ಪಿನಲ್ಲಿ, 'ಯಾವುದೇ ಉದ್ಯೋಗದ ಸ್ಥಳದಲ್ಲಿ, ಇಂತಹ ಲೈಂಗಿಕ ಕಿರುಕುಳಗಳನ್ನು ಆಂತರಿಕವಾಗಿಯೇ ಪರಿಹರಿಸಬಲ್ಲ ಸಮಿತಿ, ಪಾಲಿಸಿ, ವ್ಯವಸ್ಥೆ ಕಡ್ಡಾಯವಾಗಿ ಇರಬೇಕು' ಎಂದು ಹೇಳಿತು. ಇದೇ 'ವಿಶಾಖಾ ಸೂತ್ರ'ಗಳನ್ನು ಆಧರಿಸಿ 2013ರಲ್ಲಿ, 'ಉದ್ಯೋಗದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ನಿವಾರಣೆ) ಕಾಯ್ದೆ' ಜಾರಿಗೆ ಬಂತು.

## ಆಂತರಿಕ ಸಮಿತಿ ಕಡ್ಡಾಯ

ಈ ಮೊದಲು ಹೇಳಿದ ಘಟನೆಗಳು ಯಾವುದೇ ಉದ್ಯೋಗದ ಸ್ಥಳದಲ್ಲಿ ನಡೆಯಬಹುದು, ನಡೆಯುತ್ತವೆ. ಯಾವುದೇ ಖಾಸಗಿ ಕಂಪನಿಯ ಕಚೇರಿಗಳು, ಸರ್ಕಾರಿ ಕಚೇರಿಗಳು, ಕೋರ್ಟು, ಪೊಲೀಸ್ ಸ್ಟೇಶನ್, ಆಸ್ಪತ್ರೆ, ಮೀಡಿಯಾ ಕಚೇರಿಗಳು, ಶಾಲೆ ಕಾಲೇಜುಗಳು, ಹೋಟೆಲ್, ಫ್ಯಾಕ್ಟರಿ – ಹೀಗೆ. ಇಂತಹ ನಡತೆ, ಒಬ್ಬ ವ್ಯಕ್ತಿಯ ವೈಯಕ್ತಿಕತೆಯ ಉಲ್ಲಂಘನೆ, ಆಕ್ರಮಣವಾದ್ದರಿಂದ ಈ ಕಿರುಕುಳಗಳನ್ನು 'ಲೈಂಗಿಕ ಕಿರುಕುಳ' ಎಂದು ಕರೆಯಲಾಗಿದೆ.

ನೀವು ಕೆಲಸ ಮಾಡುವಲ್ಲಿ, ಯಾವುದೇ ರೀತಿಯಲ್ಲಿ, ಅಂದರೆ ದೈಹಿಕವಾಗಿ, ಮಾತು ಅಥವಾ ನಡತೆಯ ಮೂಲಕ, ನೇರವಾಗಿ ಅಥವಾ ಸೂಕ್ಷ್ಮವಾಗಿ, ನಿಮ್ಮ ಇಷ್ಟ, ಒಪ್ಪಿಗೆ, ಹಿತದ ವಿರುದ್ಧ ಯಾರೇ ಲೈಂಗಿಕ ಭಾವದಿಂದ ನಡೆದುಕೊಂಡರೆ ಅದು ನಿಮ್ಮ ಮೇಲೆ ನಡೆಯುವ 'ಲೈಂಗಿಕ ಕಿರುಕುಳ' (ಸೆಕ್ಷುಯಲ್ ಹೆರಾಸ್‌ಮೆಂಟ್) ಎನಿಸಿಕೊಳ್ಳುತ್ತದೆ. ಹಾಗೆ ನಡೆದ ಕಿರುಕುಳದ ಬಗ್ಗೆ, ಎಲ್ಲಾ ಉದ್ಯೋಗದ ಸ್ಥಳಗಳಲ್ಲಿ ಕಡ್ಡಾಯವಾಗಿ ಇರಲೇಬೇಕಾದ 'ಆಂತರಿಕ ಸಮಿತಿ'ಗೆ (ಇಂಟರ್ನಲ್ ಕಮಿಟಿ– ಐಸಿ) ದೂರು ನೀಡಬಹುದು. ಬಂದಂತಹ ದೂರುಗಳನ್ನು, 90 ದಿನದೊಳಗೆ ಕಾನೂನಿನನ್ವಯ ವಿಚಾರಣೆ ನಡೆಸಿ, ಇತ್ಯರ್ಥ ಮಾಡುವ ಜವಾಬ್ದಾರಿ ಆಂತರಿಕ ಸಮಿತಿಯದ್ದು. ಅಂತಹ ವಿಚಾರಣೆಯಲ್ಲಿ ಸಂಬಂಧಪಟ್ಟವರ ಹೆಸರು, ವಿವರಗಳನ್ನು ಗೌಪ್ಯವಾಗಿಡುವುದೂ ಕಡ್ಡಾಯವಾಗಿದೆ. ಅಂತೆಯೇ ಯಾವುದೇ ಉದ್ಯೋಗದ ಸ್ಥಳದಲ್ಲಿ ಕಾಯ್ದೆಯ ಅನುಸಾರ ಆಂತರಿಕ ಸಮಿತಿ ಇಲ್ಲದಿದ್ದಲ್ಲಿ ಅಲ್ಲಿನ ಮುಖ್ಯಸ್ಥರ(ಎಂಪ್ಲಾಯರ್) ಮೇಲೆ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳಬಹುದು ಎನ್ನುತ್ತದೆ ಈ ಕಾಯ್ದೆ.

ವಿಶ್ವವಿದ್ಯಾಲಯದ ಒಬ್ಬ ಪ್ರೊಫೆಸರ್ ತನ್ನ ವಿದ್ಯಾರ್ಥಿನಿಯರಿಗೆ ಹಲವು ರೀತಿಗಳಲ್ಲಿ ಕಿರುಕುಳ ಕೊಡುತ್ತಿದ್ದ. ಅಲ್ಲಿ ಕಾನೂನಿನನ್ವಯ ಇರಬೇಕಿದ್ದ ಆಂತರಿಕ ಸಮಿತಿ ಇರಲಿಲ್ಲ. ಅಂತಹ ಸಮಿತಿಯನ್ನು ರಚಿಸುವಂತೆ ವಿದ್ಯಾರ್ಥಿನಿಯರು ಪ್ರಾಂಶುಪಾಲರು, ಕುಲಪತಿಗಳನ್ನು ಕೇಳಿಕೊಂಡರೂ ಅವರು ಅದರ ಬಗ್ಗೆ ಲಕ್ಷ್ಯ ಕೊಡಲಿಲ್ಲ. ಆಗ ನಾವು ರಾಜ್ಯದ ಉಚ್ಚ ನ್ಯಾಯಾಲಯದ ಮೊರೆಹೋಗಬೇಕಾಗಿ ಬಂತು. ನಮ್ಮ ದಾವೆಯಲ್ಲಿ 'ಆಂತರಿಕ ಸಮಿತಿಯನ್ನು ರಚಿಸುವಂತೆ ಆದೇಶ ನೀಡಿ' ಎಂದಷ್ಟೇ ಕೇಳಿದ್ದೆವು. ಈ ಕಾನೂನಿನಲ್ಲಿ ಹೇಳಿರುವ ಮೂಲಭೂತ ವಿಷಯಗಳು, ನ್ಯಾಯಾಧೀಶರಿಗೂ ಸೇರಿದಂತೆ ಹಲವರಿಗೆ ತಿಳಿದಿಲ್ಲವೆಂಬ ಸತ್ಯ ಆಗ ನಮ್ಮ ಅರಿವಿಗೆ ಬಂತು.

ಉದ್ಯೋಗದ ಸ್ಥಳಗಳಲ್ಲಿ ಯಾವುದೇ ಮಹಿಳೆಗೆ ಲೈಂಗಿಕ ಕಿರುಕುಳ ಆಗದಂತೆ ಹೇಗೆ ನೋಡಿಕೊಳ್ಳಬೇಕು, ಹಾಗೆಲ್ಲಾದರೂ ಆದರೆ, ಅದನ್ನು ಹೇಗೆ ನಿರ್ವಹಿಸಬೇಕು ಎನ್ನುವ ಬಹಳ ಪ್ರಮುಖವಾದ ವಿಷಯದ ಬಗ್ಗೆ ಮಾತನಾಡುವ ಈ ಕಾಯ್ದೆ, ಏನು ಹೇಳುತ್ತದೆ ಎನ್ನುವ ಬಗ್ಗೆ ಅರಿವು ಮೂಡಿಸುವ ಅವಶ್ಯಕತೆ ಇದೆ. ಹಾಗೆಯೇ, ತಮ್ಮ ತಮ್ಮ ಉದ್ಯೋಗದ ಸ್ಥಳಗಳಲ್ಲಿ ಇದನ್ನು ಅಳವಡಿಸಿಕೊಳ್ಳಲೇಬೇಕಾದ ಅಗತ್ಯವೂ. ನಿಮ್ಮ ಉದ್ಯೋಗದ ಸ್ಥಳದಲ್ಲಿ ಆಂತರಿಕ ಸಮಿತಿ **(Prevention of Sexual Harassment, Internal Committee POSH / IC)** ಇದೆಯೇ? ವಿಚಾರಿಸಿ ನೋಡಿ!

(ಘಟನೆಗಳಲ್ಲಿ ಬರುವ ಹೆಸರು ಬದಲಾಯಿಸಲಾಗಿದೆ)

ಪ್ರತಿಕ್ರಿಯಿಸಿ: feedback@sudha.co.in